ಸಂದೇಶ ಮೆಲ್ಲಮೆಲ್ಲಗೆ ತಮ್ಮ ಕಿವಿಯಿಂದ ದೂರವಾಗುತ್ತಿದೆ ಎನ್ನಿಸಿತು. ಆ ನಿರ್ದಯ ಮೃತ್ಯು ಆದೇಶ ತಮ್ಮ ತಲೆಯಿಂದ ಪೂರಾ ತೊಲಗಬೇಕೆಂದಾದರೆ ಆ ಕೋಮಲ ಕೆನ್ನೆಗಳನ್ನೇ ಮರಳಿ ಕರೆದುಕೊಳ್ಳಬೇಕೆನ್ನಿಸಿತು; ಆದರೆ... ಇದೀಗ ಆಸೆಯಿಂದ ಕರೆಯಹೋದ ತಕ್ಷಣ ಅವು ಮತ್ತೆ ಬರಲೊಪ್ಪದೆ, ಕೆದರು ಕೂದಲ ಭಯಾನಕ ಹೆಣ್ಣು ಮುಖಗಳಾಗಿ ಮಾರ್ಪಟ್ಟು, ರೊಂಯ್ಯನೆ ತಮ್ಮ ಮೇಲೆರಗಿ ಬಂದಂತೆ ಕಾಣತೊಡಗಿತು... ಬಾಲ್ಯದಲ್ಲಿ ಕೇಳಿದ್ದ ಹಳ್ಳಿ ಕತೆಗಳನ್ನು ಅತಿಯಾಗಿ ನಂಬಿದ್ದರಿಂದಲೋ, ಅಥವಾ ತಿಂಗಳೂ ತಿಂಗಳೂ ತಪ್ಪದೆ ಓದುತ್ತಿದ್ದ 'ಚಂದಮಾಮ'ದ ಬೇತಾಳ ಕತೆಗಳ ಪ್ರಭಾವದಿಂದಲೋ ಏನೋ... ಈ ಹೆಂಗಸರೆಲ್ಲ ಸಾವಿನ ದೂತಿಯರೇ ಇರಬೇಕೆನ್ನಿಸಿ ರುದ್ರಣ್ಣ ಬೆಚ್ಚಿ ಮೇಲೆದ್ದು ಕೂತರು.

ಮರುಗಳಿಗೆಗೇ ಪ್ರಭುದೇವಸ್ವಾಮಿಗಳ ದನಿ ಮತ್ತೆ ಕಿವಿಯಲ್ಲಿ ಮೊರೆದಂತಾಗತೊಡಗಿತು. ಇಲ್ಲೇ ಈ ಹಾಸಿಗೆಯ ಮೇಲೆ ಕೂತಿದ್ದರೆ ಅದೇ ದಿಗಿಲು ಮತ್ತೆ ಅಮರಿಕೊಳ್ಳಬಹುದೆನ್ನಿಸಿ ಮೇಲೆದ್ದು ರೀಡಿಂಗ್ ರೂಮಿಗೆ ಬಂದು ರುದ್ರಣ್ಣ ಕೈ ಗಡಿಯಾರ ನೋಡಿದರು. ಗಂಟೆ ಐದೂವರೆಯಾಗಿತ್ತು. ತಲೆಯಲ್ಲಿ, ಕಿವಿಯಲ್ಲಿ ಸುತ್ತುತ್ತಲೇ ಇದ್ದ ಪ್ರಭುದೇವಸ್ವಾಮಿಗಳ ವಾಕ್ಯವನ್ನು ಯಾರಿಗಾದರೂ ಹೇಳಲೇಬೇಕೆನ್ನಿಸಿತು; ಯಾರಿಗೆ ಹೇಳುವುದು? ಹಳ್ಳಿಗೆ ಹೋಗಿದ್ದ ಹೆಂಡತಿಗೆ ಮೊಬೈಲ್ ಬಳಸುವುದು ಕೂಡ ಗೊತ್ತಿರಲಿಲ್ಲ; ಅವಳ ತವರುಮನೆಯಲ್ಲಿ ಫೋನಿರಲಿಲ್ಲ. ಅವಳ ಮನೆಯಲ್ಲಿ ಫೋನಿದ್ದರೂ ಅವಳ ಜೊತೆ ಇದನ್ನೆಲ್ಲ ಹೇಳಿಕೊಳ್ಳುತ್ತಿದ್ದೆನೋ ಇಲ್ಲವೋ ಎನ್ನುವುದು ಕೂಡ ರುದ್ರಣ್ಣನವರಿಗೆ ಖಾತ್ರಿಯಿರಲಿಲ್ಲ. ಇನ್ನು ಯಾರಾದರೂ ಗೆಳೆಯರಿಗೆ ಹೇಳೋಣವೆಂದು ಇದ್ದ ಕೆಲವೇ ಗೆಳೆಯರನ್ನು ಮನಸ್ಸಿನಲ್ಲೇ ಮಗುಚಿ ಹಾಕಿ ನೋಡಿದರೆ, ಇಂಥ ಭಯವನ್ನೆಲ್ಲ ಹೇಳಿಕೊಳ್ಳಲು ತಕ್ಕ ಗೆಳೆಯರೇ ತನ್ನ ಜೀವನದಲ್ಲಿ ಇಲ್ಲವಲ್ಲ ಎಂಬ ಕಟುವಾಸ್ತವ ರಪ್ಪಂತ ಕೆನ್ನೆಗೆ ಹೊಡೆದು ಪಿಚ್ಚೆನ್ನಿಸಿತು. ಇಂಥದನ್ನೆಲ್ಲ ತೋಡಿಕೊಳ್ಳಲು ಇರುವ ಹಿರಿಯರೆಂದರೆ ಪ್ರಭುದೇವಸ್ವಾಮಿಗಳೊಬ್ಬರೇ. ಈ ಗಳಿಗೆಯಲ್ಲಿ ಅವರಿಗೆ ಇದನ್ನೆಲ್ಲ ಹೇಗೆ ಹೇಳುವುದು! ಈಗ ಇದ್ದದ್ದರಲ್ಲಿ ಈ ಭಯವನ್ನು ಹೇಳಿಕೊಳ್ಳಲು ಉಳಿದಿರುವವನೆಂದರೆ, 'ಏನ್ ಬಾಸ್!' 'ಹೇಳೀ ಬಾಸು' ಎಂದು ಮಾತುಮಾತಿಗೂ ತಮ್ಮನ್ನು ಬಾಸ್ ಎನ್ನುತ್ತಾ ಮುದದಲ್ಲಿಡುವ ಹಳೆಯ ಗೆಳೆಯ ರಾಮಸ್ವಾಮಿ ಮಾತ್ರ.

ರಾಮಸ್ವಾಮಿಗೆ ಫೋನ್ ಮಾಡಲೋ ಬೇಡವೋ ಎಂದು ಹಿಂಜರಿಯುತ್ತಲೇ ರುದ್ರಣ್ಣ ಎರಡು ಸಲ ಫೋನ್ ಮಾಡಿದ ಮೇಲೆ ಕೊನೆಗೂ ನಿದ್ದೆಯ ದನಿಯಲ್ಲಿ 'ಹಲೋ! ಇದೇನ್ ಬಾಸು? ಇದೇನ್ ಬೆಳಬೆಳಗ್ಗೆ? ಆರಾಮ್ ತಾನೆ?' ಎಂದು ರಾಮಸ್ವಾಮಿ ಗೊಣಗಿದ. ರುದ್ರಣ್ಣ ಒಂದೇ ಉಸುರಿನಲ್ಲಿ ರಾಮಸ್ವಾಮಿಗೆ ಕನಸಿನ ಕಾರಣಿಕ ಹೇಳಿದರೂ ಅವನು ಅದರ ಬಗ್ಗೆ ಒಂದಿಂಕ್ರದಷ್ಟಾದರೂ ತಲೆ ಕೆಡಿಸಿಕೊಂಡಂತೆ ಕಾಣಲಿಲ್ಲ. 'ಇದೇನ್ ಬಾಸು! ಇಂಥಾ ಗ್ರೇಟ್ ಪಬ್ಲಿಕ್ ಪರ್ಸನಾಲಿಟಿ ಆಗಿ... ಯೇ ಅವನವ್ವನ್... ಈ ತಗಡು ಕನುಸ್ಗೆಲ್ಲ ಯಾಕ್ ಬಾಸು ಇಷ್ಟು ಥಂಡಾ ವಡ್ದಿದೀರ!' ಅಂದ. ತಾನು ಉತ್ತರ ಕೊಡದಿದ್ದನ್ನು ಗಮನಿಸಿಯೋ ಏನೋ, ಸಮಾಧಾನ ಮಾಡುವ ಧಾಟಿಯಲ್ಲಿ, 'ಸತ್ತೋದಂಗೆ ಕನಸು ಬಿದ್ದಷ್ಟೂ ಇನ್ನಾ ಆಯಸ್ಸು ಹೆಚ್ಚುತ್ತೆ ಅಂತ ನಮ್ಮವ್ವ ಅನ್ನೋಳು ಬಾಸು!' ಅನ್ನುತ್ತಾ ದೇಶಾವರಿ ನಗೆ ನಕ್ಕ. ಹೀಗೆ ನಕ್ಕ ಮೇಲಂತೂ ತನ್ನ ವಿವರಣೆಯ ಗತ್ತಿನಿಂದ ಹೊಸ ಹುಕ್ಕಿ ಪಡೆದವನಂತೆ ರಾಮಸ್ವಾಮಿ ನಿದ್ದೆಗಣ್ಣಿನಿಂದ ಪೂರಾ ಹೊರಬರುತ್ತಾ ಏಕ್ ದಂ ಆರಾಮಾಗಿ ಫಿಲಸಾಫಿಕಲ್ ರಾಗದಲ್ಲಿ ಮುಂದುವರಿಸಿದ: 'ಅಯ್ಯೋ ಇಷ್ಟು ವರ್ಷ ಸಾಕಷ್ಟು ಜಾಲಿಯಾಗಿ, ಮಜವಾಗಿ ಬದುಕಿ ಲೈಫ್ ಸಕತ್ ಎಂಜಾಯ್ ಮಾಡಿದೀರ ಬಿಡಿ ಬಾಸು! ಅಬ್ಬಬ್ಬಬ್ಬಬ್ಬಾ! ನಿಮ್ದು ಎಂಥಾ ಪಬ್ಲಿಕ್ ಲೈಫೂ, ಏನ್ ಕತೆ! ಇವತ್ತೂಗ ನಿಮ್ಮುನ್ ಕಂಡ್ರೆ ಪ್ರಾಣ ಬಿಡೋ ಹೆಣ್ಮಕ್ಕಳಿದಾರಲ್ಲ ಬಾಸು!'